**ಪಿ.ಡಬ್ಲ್ಯೂಃ 1**

ದಿನಾಂಕಃ15.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿದಾರರ ಪರಃ ಶ್ರೀ ಯುಸಿಃ ವಕೀಲರಿಂದ**

13. ಸರ್ವೆ ನಂಃ175/ಎ/3/ಬಿ ರ 1.56 ಎಕರೆ ಈರಣ್ಣ ಅಲಿಯಾಸ್ ಗಿಡ್ಡಪ್ಪ ರವರು 5 ನೇ ಪ್ರತಿವಾದಿಗೆ ವಿಲ್ ಮುಖಾಂತರ ಬರೆದುಕೊಟ್ಟಿದ್ದಾರೆ ಎಂದರೆ ನಿಜ. ದಾವಾ ಆಸ್ತಿಗಳು ಕೋನೇರು ಬಸಪ್ಪನಿಗೆ ಆತನ ತಂದೆ ತಾತನಿಂದ ಬಂದಿರುತ್ತವೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಕೋನೇರು ಬಸಪ್ಪ ರವರ ಎಲ್ಲಾ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಕಂದಾಯ ಇಲಾಖೆಯಿಂದ ಪಡೆದ ವಂಶವೃಕ್ಷವನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

14. ನಿಪಿ.13 ಮತ್ತು 14 ರ ಪ್ರಕಾರ ನಾನು ಯಾವುದೇ ಮ್ಯುಟೇಶನ್ ಮಾಡಿಕೊಂಡಿಲ್ಲ ಎಂದರೆ ನಿಜ. ಆಸ್ತಿ ಹೊಡೆಯಬೇಕೆಂಬ ಉದ್ದೇಶ ಪೂರ್ವಕವಾಗಿ ವಿಳಂಬ ಮಾಡಿ ನಿಪಿ13 ಮತ್ತು 14 ನ್ನು ಹಾಜರುಪಡಿಸಿ ಪಾಲು ಕೇಳುತ್ತಿದ್ದೇನೆ ಎಂದರ ಸರಿಯಲ್ಲ. ದಾವಾ ಆಸ್ತಿಗಳು ಕೊನೇರು ಬಸಪ್ಪನ ಪಿತ್ರಾರ್ಜಿತ ಆಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಪಾಲು ಕೇಳಲು ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ 1 ನೇ ಸ್ವತ್ತನ್ನು ಮೃತ 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ದಾನ ಪತ್ರದ ಮೂಲಕ ಬರೆದುಕೊಟ್ಟಿದ್ದರಿಂದ ಅದರಲ್ಲಿ ಪಾಲು ಕೇಳಲು ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ 2 ನೇ ಸ್ವತ್ತು ಕೋನೇರು ಬಸಪ್ಪನ ಸ್ವತ್ತು ಇರದೇ ಇರುವುದರಿಂದ ಅದರಲ್ಲಿ ಪಾಲು ಕೇಳಲು ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

15. ಕುಟುಂಬದ ಖರ್ಚಿಗಾಗಿ ದಾವಾ ಡಿ ಶೆಡ್ಯೂಲ್ ಸ್ವತ್ತು ಗಳನ್ನು ಮಾರಾಟ ಮಾಡಿದ್ದರಿಂದ ಅವುಗಳಲ್ಲಿ ಪಾಲು ಕೇಳಲು ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಬಿ ಶೆಡ್ಯೂಲ್ 4 ನೇ ಸ್ವತ್ತನ್ನು ಬೇರೆ ಜಮೀನುಗಳಿಗೆ ನೀರಿನ ಅನುಕೂಲಕ್ಕಾಗಿ ಕೋನೇರು ಬಸಪ್ಪ ತನ್ನ ಜೀವಿತಾವಧಿಯಲ್ಲಿ 8 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಆದ್ದರಿಂದ ಅದರಲ್ಲಿ ಪಾಲು ಕೇಳಲು ನನಗೆ ಹಕ್ಕು ಇರುವುದಿಲ್ಲ ಎಂದರೆ ಸುಳ್ಳು.

16. ಕುಟುಂಬದ ನಿರ್ವಹಣೆಯ ಖರ್ಚಿಗೆ ದಾವಾ ಬಿ ಶೆಡ್ಯೂಲ್ ನಲ್ಲಿಯ ಜಮೀನು ಸರ್ವೆ ನಂಃ348 ಸಿ1 ಮತ್ತು 348 ಸಿ2 ಜಮೀನುಗಳನ್ನು ಮೃತ 1 ನೇ ಪ್ರತಿವಾದಿ ತನ್ನ ಜೀವಿತಾವಧಿಯಲ್ಲಿ 8

**ಪಿ.ಡಬ್ಲ್ಯೂಃ 1**

ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರಿಂದ ಅದರಲ್ಲಿ ಪಾಲು ಕೇಳಲು ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸದೆ ಇರುವುದರಿಂದನನಗೆಯಾವುದೇ ರೀತಿಯ ಹಿಸ್ಸೆ ಬರುವುದಿಲ್ಲ ಎಂದರೆ ಸರಿಯಲ್ಲ . ನಾನು ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**